International Journal of Kannada Research
www.kannadajournal.com

**ISSN: 2454–5813**
IJKR 2018; 4(4): 124-125
© 2018 IJKR
www.kannadajournal.com
Received: 15-08-2018
Accepted: 17-09-2018

**ಕವಿತಾ ಸಿ.ಡಿ**
ಸಂಶೋಧನಾ ವಿದ್ಯಾರ್ಥಿ
ಎಸ್.ವಿ.ಪಿ.ಕನ್ನಡ ಅಧ್ಯಯನ ವಿಭಾಗ
ಮಂಗಳೂರು ವಿಶ್ವವಿದ್ಯಾನಿಲಯ

**Correspondence**
**ಕವಿತಾ ಸಿ.ಡಿ**
ಸಂಶೋಧನಾ ವಿದ್ಯಾರ್ಥಿ
ಎಸ್.ವಿ.ಪಿ.ಕನ್ನಡ ಅಧ್ಯಯನ ವಿಭಾಗ
ಮಂಗಳೂರು ವಿಶ್ವವಿದ್ಯಾನಿಲಯ

# ಹರಿಹರನ ರಗಳೆಗಳಲ್ಲಿ ಒಂದು 'ಸಾಮವೇದಿ ರಗಳೆ'ಯ ಒಂದು ನೋಟ

**ಕವಿತಾ ಸಿ.ಡಿ**

ವರ್ಣಧರ್ಮದಲ್ಲಿನ ಬ್ರಾಹ್ಮಣ ಶ್ರೇಷ್ಠತೆಯನ್ನು ವೀರಶೈವ ಧರ್ಮದ ಹೊಸ ತಾತ್ವಿಕ ವಿಚಾರವಾದ ಭವಿ-ಭಕ್ತ ಎನ್ನುವ ಪರಿಕಲ್ಪನೆಯನ್ನು ಬಳಸಿಕೊಂಡು ಸೀಳಿ ಹಾಕುವ ಪ್ರಯತ್ನ ಸಾಮವೇದಿ ರಗಳೆಯ ವಸ್ತುವಾಗಿದೆ. ಬ್ರಾಹ್ಮಣನನ್ನು ಛೇಡಿಸಿ, ಆತನ ಒಪ್ಪಿತ ಮೌಲ್ಯಗಳನ್ನು ಅನರ್ಥಗೊಳಿಸಿ ಶಿವಭಕ್ತನನ್ನಾಗಿಸುವ ಪ್ರಯತ್ನ ಸರಳವಾಗಿ ಸಾಗುತ್ತದೆ. ಪಾತ್ರಗಳು ವಿಚಾರಕ್ಕೆ ತಕ್ಕಂತೆ ಬಳುಕುತ್ತದೆ. ಕವಿಯ ಮುಖವಾಣಿಯಂತೆ ಪಾತ್ರಗಳು ಗೋಚರಿಸುತ್ತವೆ. ವರ್ಣ, ಪೂಜೆ, ಅಸ್ಪೃಶ್ಯತೆ, ಜಾತಿ ವ್ಯವಸ್ಥೆ, ವ್ಯಕ್ತಿಗಳ ಜಾತಿ ಮನೋಧರ್ಮ, ಭವಿ-ಭಕ್ತ ಪರಿಕಲ್ಪನೆ, ಶ್ರಾದ್ಧಕ್ಕೆ ಶ್ವಪಚನ ಪ್ರವೇಶ ಇವೆಲ್ಲವೂ ರಗಳೆಯಲ್ಲಿ ಬೆರೆತು ಹೋಗಿವೆ. ಈ ರಗಳೆಯಲ್ಲಿ ಶಿವನ ಪಾತ್ರವು ಬಹುಮುಖ್ಯವಾದುದು. ಎರಡು ಲೌಕಿಕ ಪಾತ್ರಗಳು, ಅಲೌಕಿಕ ಪಾತ್ರಗಳೊಂದಿಗೆ ಪರೋಕ್ಷವಾಗಿ ಸಂಬಂಧವನ್ನು ಪಡೆದಿವೆ. ಶ್ವಪಚ ಪಾತ್ರವು ಸಿದ್ಧ ಮಾದರಿಯದಾಗಿದೆ. ವೀರಶೈವ ಧರ್ಮದಲ್ಲಿ ಶ್ವಪಚನಿಗೂ ಉನ್ನತ ಸ್ಥಾನವು ಲಭ್ಯವಾಗಿದೆ, ಬ್ರಾಹ್ಮಣ ಸಾಮವೇದಿಯನ್ನು ಕೀಳಾಗಿ ಕಾಣುವ ಹೊಸ ದೃಷ್ಟಿಕೋನವನ್ನು ಈ ರಗಳೆಯಲ್ಲಿ ಗುರುತಿಸಬಹುದು.

**ಕಥಾಸಾರಾಂಶ**

ಉತ್ತರದ ಛತ್ತಿಸಪುರದಲ್ಲಿ ಸಾಮವೇದಿ ಇದ್ದ. ಅವನು ಮಹಾ ವಿದ್ವಾಂಸನಾಗಿದ್ದು, ಮೂರು ಸಾವಿರದ ಐನೂರು ಶಿಷ್ಯರಿದ್ದರು. ಅವನ ಆಚರಣೆಯೆಲ್ಲ ವೇದಮಯ, ನುಡಿಯೆಲ್ಲ ಶಾಸ್ತ್ರಮಯ ಆಗಿತ್ತು. ಅದೇ ವೇಳೆಗೆ ಶ್ವಪಚನು ಶಿವಪೂಜೆಯನ್ನು ಮಾಡಲು ಕಾಡಿಗೆ ಹೋಗುತ್ತಾನೆ. ಸಾಮವೇದಿಯು ತಮ್ಮ ಶಿಷ್ಯರೊಂದಿಗೆ ಒಮ್ಮೆ ಅರಣ್ಯದಲ್ಲಿ ಬೋಧಿಸಿ, ಆಕಾಶಗಾಮಿಯಾಗಿ ಹೋಗುತ್ತಿದ್ದ. ಯಾರೂ ಸುಳಿಯಲು ಅಸಾಧ್ಯವಾದ ಸ್ಥಳದಲ್ಲಿ ಪೂಜೆಯ ಏರ್ಪಾಡನ್ನು ಮಾಡುತ್ತಾನೆ. ಸೆಜ್ಜೆಯೊಳಗಿರ್ದ ಶಿವಲಿಂಗ ಎಂದಿರುವುದು ಶ್ವಪಚನು ಇಷ್ಟಲಿಂಗವನ್ನು ಹೊಂದಿರುವನು ತಿಳಿಯುತ್ತದೆ. ತನ್ನ ಪೂಜೆಯಾದ ಮೇಲೆ ನೈವೇದ್ಯಕ್ಕಾಗಿ ತನ್ನ ಜಾತಿ ಧರ್ಮದ ಮಾಂಸದ ಅಡಿಗೆಯನ್ನು ಮಾಡಲು ತೊಡಗುತ್ತಾನೆ.

**ಕಪಟ ರಹಿತಂ ಜಾತಿಧರ್ಮದೋಗರವಿರಲು,**
**ಶ್ವಪಚ ನಾಮ ತಾನನುಕೂಲವಾಗಿರುವ**

ಅನ್ನವನ್ನು ಮಾಡುತ್ತಾ ದೇವರನ್ನು ಮನಸ್ಸಿನಲ್ಲಿ ನೆನೆಸಿಕೊಂಡು ಪರಿಶುದ್ಧವಾದ ಮನಸ್ಸಿನಿಂದ ಅರ್ಪಿಸುತ್ತಾನೆ.

**ಅಭವಭಕ್ತಂ ಸಾಮವೇದಿಗಳ ಕಾಣುತಂ**
**ಹರ ಹರ ನಮಃಶಿವಾಯೆಂದೆನುತೆ ಕಂಡಲ್ಲಿ**
**ಕೆರಹಿಂದೆ ಮುಚ್ಚಿದಂ ಭವಿ ಕಾಣದಂತಲ್ಲಿ**

ಆಕಾಶಮಾರ್ಗವಾಗಿ ಹೋಗುತ್ತಿದ್ದ ಸಾಮವೇದಿಗೆ ಒಲೆಯ ಮೇಲೆ ತೆರೆದಿಟ್ಟ ಪಾತ್ರೆ ಮೇಲೆ ಶ್ವಪಚನು ತನ್ನ ಕೆರಗಳಿಂದಲೇ ಪಾತ್ರೆಯನ್ನು ಮುಚ್ಚುತ್ತಾನೆ. ಶ್ವಪಚನ ವರ್ತನೆ ಸಾಮವೇದಿಗೆ ಆಶ್ಚರ್ಯವನ್ನುಂಟು ಮಾಡುತ್ತದೆ. ಆಕಾಶದಿಂದ ಇಳಿದು ಬಂದು ಶ್ವಪಚನನ್ನು ಕೇಳುತ್ತಾನೆ. ಆದರೆ ಶ್ವಪಚ ಮಾತನಾಡುವುದಿಲ್ಲ. ಮಾರನೆ ದಿನ ಶಿವನು ಕನಸಿಗೆ ಬಂದು ಹೀಗೆ ಹೇಳುತ್ತಾನೆ.

**ಎಲೆ ಸಾಮವೇದಿ ನೀನೇಕೆ ಮರುಳಾದ ಪೈ**
**ಕುಲದ ಗರ್ವದೊಳಿಂತು ಕೆಟ್ಟು ಹಾಳಾದಪೈ**
**ಆನೆಂದೊಡಂ ಶ್ವಪಚದೇವರೆ ಬೇರಿಲ್ಲ**
**ನೀ ನವರ್ಗಾಳಾಗೆ ನಿನಗೆ ತೀರದುದಿಲ್ಲ.**

ಎಂಬುದು ಇಲ್ಲಿ ಮಹತ್ವದ ಮಾತು. ಬ್ರಾಹ್ಮಣನಾದ ಸಾಮವೇದಿಗೆ ಶ್ವಪಚಯ್ಯ ದೇವರು ಎಂದು ಒಪ್ಪಿಕೊಳ್ಳುವಂತೆ ಮಾಡುವ ಕೆಲಸವನ್ನು ಶಿವಶರಣರ ಚಳುವಳಿ ಮಾಡಿದೆ.

**ನಿನ್ನ ದರುಶನದಿಂದವನ ಭವಿತನಂ ಹೋಯ್ತು**
**ನಿನ್ನ ಕಾಣ್ಕೆಯೊಳವನ ಕುಲವೆಲ್ಲ ಹಸನಾಯ್ತು.**

ಶಿವ ಶ್ವಪಚಯ್ಯನ ಕನಸಿಗೆ ಬಂದು ನಿನ್ನ ದರುಶನದಿಂದ ಭವಿತನ ಮಾಯವಾಗಿ ಉತ್ತಮೋತ್ತಮ ಶಿವಭಕ್ತನಾಗುತ್ತಾನೆ. ಯಾರು ಯಾರನ್ನು ದೂರ ಮಾಡಬಾರದೆಂಬ ಸಂದೇಶವೇ ಆಗಿದೆ.

**ಸಾಮವೇದಿ :** ಭವಿಗಳೊಡನೆ ನುಡಿ ಇಲ್ಲ ಎಂದಾಗ ಗಿಡಮರ, ಮೃಗ, ಬೇಡರು, ಚಾಂಡಾಲರು ಎಲ್ಲರೂ ಭಕ್ತರೇ ಎಂದು ಕೇಳಿದ.

**ಶ್ವಪಚ** : ಗಿಡ ಮರದ ಹೂಪತ್ರೆ ಶಿವನಿಗೆ, ಕಾಮ ಕ್ರೋಧ ಮರಕ್ಕಿದೆಯೆ? ಎಳೆ ಹುಲ್ಲು ತಿಂದು ನೀರು
ಕುಡಿವ ಮೃಗ ಯಾರಿಗೂ ಬಾಧಿಸದು. ಬೇಟೆಯಾಡುವ ಚಾಂಡಾಲರದು ಜಾತಿಧರ್ಮ.
ಆದರೆ ನೀನು ಕರ್ಮ ಚಾಂಡಾಲ ಎಂದು ಉತ್ತರಿಸಿದ. ಅವನಿಗೆ ಶಿವ ಏಕೋದೇವ
ಎಂಬುದನ್ನು ಹೇಳಿ, ಆಕಾಶಗಾಮಿ ಎಂಬ ಅಹಂಕಾರ ನಿನಗೆ, ಪಕ್ಷಿಗಳು ಹಾರುತ್ತವೆ ನಿನ್ನಂತೆ.
ನೀನು ಬೇಡ ಚಾಂಡಾಲರಿರಲಿ ನಾಯಿಂದಲೂ ನಿಕೃಷ್ಟ, ಸುಡುಸುಡಲೆ ಭವಿ ನೀನು ಎಂದು
ಹೀಗಳೆದ. ಎಷ್ಟೇ ಜ್ಞಾನಿ ಜಾಣನಾದರೂ ಭಕ್ತನಲ್ಲದವನು ಭವಿ, ಅವನು

**ಸ್ವೀಕಾರಾರ್ಹನಲ್ಲ ಎಂದು ಶಿವಭಕ್ತರು ಹೇಳಬೇಕಿತ್ತು.**

ವೇದವನ್ನು ಕಲಿಯಲು ಅಂದಿನ ಕಾಲದಲ್ಲಿ ಬ್ರಾಹ್ಮಣರು ಕಾಡಿಗೆ ಹೋಗುತ್ತಿದ್ದರು. ಇದಕ್ಕೆ ಕಾರಣ, ಶೂದ್ರರು ಓದುವುದಿರಲಿ, ಕೇಳಬಾರದು ಎನ್ನುವುದೂ ಒಂದು ಉದ್ದೇಶವಾಗಿರಬಹುದು. ಸಾಮವೇದಿಗಳು ಕಲಿತ ವಿದ್ಯೆ ನೆಲದ ಬದುಕಿನೊಂದಿಗೆ ಸಂಬಂಧವನ್ನು ಕಡಿದುಕೊಂಡಿತ್ತು. ಅವರಿಗೆ ಕಲಿಯುವ ಅಧಿಕಾರವಿದ್ದು, ಉಳಿದವರಿಗೆ ಕಲಿಯುವುದನ್ನು ನಿಷೇಧಿಸಲಾಗಿತ್ತು. ಬ್ರಾಹ್ಮಣರು ಮಾತ್ರ ಗುರುವಿನ ಸ್ಥಾನವನ್ನು ಪಡೆದಿದ್ದರು. ಅನ್ಯರು ಗುರುವಿನ ಸ್ಥಾನಕ್ಕೆ ಬರುವಂತಿಲ್ಲ. ಶ್ವಪಚಯ್ಯನು ಹುಟ್ಟಿನಿಂದ ಅಸ್ಪೃಶ್ಯ. ವರ್ಣಧರ್ಮದಿಂದ ವೀರಶೈವಧರ್ಮಕ್ಕೆ ಮತಾಂತರಗೊಂಡವನು. ವೀರಶೈವ ಧರ್ಮಕ್ಕೆ ಹೋದರೂ ತನ್ನ ಪೂರ್ವದ ಊಟೋಪಚಾರವನ್ನು ಹಾಗೆಯೇ ಉಳಿಸಿಕೊಂಡಿದ್ದನು ಅಲ್ಲದೆ ಶಿವಭಕ್ತ ಶ್ರೇಷ್ಠ, ಭವಿಗಳು ಕನಿಷ್ಠ ಎನ್ನುವ ವಿಚಾರವನ್ನು ತನ್ನ ಬದುಕಿನಲ್ಲಿ ಅಳವಡಿಸಿಕೊಂಡಿದ್ದನು.

ಶ್ವಪಚನು ಶಿವಭಕ್ತನಾದುದರಿಂದ ಅವಮಾನಿತ ಕೀಳರಿಮೆಯ ವರ್ಣಧರ್ಮದಿಂದ ಹೊರ ಬಂದದ್ದರಿಂದ ಶ್ವಪಚನಿಗೆ ಬ್ರಾಹ್ಮಣನನ್ನು ಕಡೆಗಣಿಸಿ, ಬ್ರಾಹ್ಮನ ಧರ್ಮದ ಜಾತಿಮೌಲ್ಯಗಳನ್ನು ಮೆಟ್ಟಿನಿಲ್ಲಲು ಸಾಧ್ಯವಾಯಿತು. ವರ್ಣಧರ್ಮದಲ್ಲಿ ಸಾಧ್ಯವಿಲ್ಲದ ಗುರುಸ್ಥಾನವನ್ನು ಶ್ವಪಚನು ಪಡೆದರೆ, ಸಾಮವೇದಿಯು ವರ್ಣಧರ್ಮದ ಗುರುಸ್ಥಾನವನ್ನು ಬಿಟ್ಟುಕೊಟ್ಟು ಶ್ವಪಚನ ಶಿಷ್ಯನಾಗುತ್ತಾನೆ. ಸಾಮವೇದಿಯ ತಂದೆಯ ಶ್ರಾದ್ಧಕ್ಕೆ ಗುರುವನ್ನು ಕರೆದಾಗ ಶ್ವಪಚನ ಬದಲು ಅಲ್ಲಿಗೆ ಶಿವನ ರೂಪದ ಶ್ವಪಚ ಸತ್ತ ಕುರಿಯನ್ನು ಹೆಗಲ ಮೇಲೆ ಹೊತ್ತುಕೊಂಡು ಬರುತ್ತಾನೆ. ಅದನ್ನು ನೋಡಿ ವಿಪ್ರಕುಲದ ಜನರು ಹೋಡಿಹೋಗುತ್ತಾರೆ. ಇಲ್ಲಿ ಮತ್ತೊಂದು ತಿಳಿಯಬೇಕಾದ ಈ ರಗಳೆಯಲ್ಲಿ 'ಪಿತೃ ದಿವಸಕ್ಕೆ ಬಾರೆವಾನೆಂದು ಹರನಾಗಮನಕ್ಕೆ ದೂರಂ' ಎಂದು ಹೇಳುವುದರಲ್ಲಿ ಶರಣರು ತಿಥಿ ಮಂತಾದ ಆಚರಣೆಗಳನ್ನು ಆ ಕಾಲದಲ್ಲಿಯೇ ವಿರೋಧಿಸುತ್ತಿದ್ದರು ಎನ್ನುವುದು ಸ್ಪಷ್ಟವಾಗಿ ತಿಳಿಯುತ್ತದೆ. ಶ್ರಾದ್ಧ ಸಮಯದಲ್ಲಿ ಶಿವನು ಬರುವ ಪ್ರಸಂಗವು ಶಿವ ಬೇರೆಯಲ್ಲ, ಶಿವಭಕ್ತರು ಬೇರೆಯಲ್ಲ ಎಂಬ ತತ್ವ ಆತನ ಮಾತಿನಲ್ಲಿ ಅಡಗಿರುವುದು ಕಂಡುಬರುತ್ತದೆ.

**ಪರಾಮರ್ಶನ ಗ್ರಂಥಗಳು**


1. ಡಾ.ಸಿ.ವೀರಣ್ಣ,2011, ಕನ್ನಡ ಸಾಹಿತ್ಯ–2 ಚಾರಿತ್ರಿಕ ಬೆಳವಣಿಗೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು.
2. ಸಂ.ಫ಼.ಗು.ಹಳಕಟ್ಟಿ, 1968, ಹರಿಹರನ ರಗಳೆಗಳು (ಕವಿ,ಕಾವ್ಯ,ವಿಮರ್ಶೆ ಸಹಿತ),ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ.
3. ಸಂ.ಎಂ.ಎಂ.ಕಲಬುರ್ಗಿ, 1999, ಹರಿಹರನ ರಗಳೆಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ವಿದ್ಯಾರಣ್ಯ.